**ಅವನ ಮಾತು ನನಗೆ ಅರ್ಥವಾಗಲಿಲ್ಲ. ನನ್ನ ಅಚ್ಚರಿ ಕಂಡು, ಆತ ನಕ್ಕು ಹೇಳಿದ, ''ರಾತ್ರಿ ನಿದ್ದೆ ಬಿಡಲು ಸಿದ್ಧನಿದ್ದೀಯಲ್ಲ. ಈ ಬೂಟಿನ ಪ್ರಕರಣಕ್ಕೆ ಒಂದು ತಿರುವು ಸಿಗುವ ಲಕ್ಷಣವಿದೆ'' ಎಂದ.**

ಯಾರೂ ದೂರು ಕೊಡದೇ, ಅಡ್ಡಂಡ ಕರಮಚಂದನೇ ಸ್ವಯಂಪ್ರೇರಿತವಾಗಿ ತನಿಖೆ ನಡೆಸಿದ ವಿಶಿಷ್ಟ ಪ್ರಸಂಗವೊಂದು, ನಾನು ಆತನಲ್ಲಿ ವಕೀಲಿಕೆ ಕಲಿಯಲು ಸೇರಿಕೊಂಡ ಮೂರನೆಯ ವರ್ಷದ ಅಂತ್ಯದಲ್ಲಿ ನಡೆಯಿತು. ತಮಾಷೆಯಾಗಿ ಕಂಡ ಸುದ್ದಿಯೊಂದರ ಬೆನ್ನು ಹಿಡಿದು ಹೋದಾಗ, ಹೊರಬಿದ್ದ ಸತ್ಯವಂತೂ ದಂಗು ಬಡಿಸುವಂತಿತ್ತು!

ಅದು ಡಿಸೆಂಬರ್ ತಿಂಗಳ ಮೊದಲ ವಾರ. ಬೆಳಗ್ಗೆ ಕಾಫಿಯ ಕಪ್ ಕೈಯಲ್ಲಿ ಹಿಡಿದು, ನಾನು ದಿನಪತ್ರಿಕೆಯಲ್ಲಿ ಕಣ್ಣಾಡಿಸುವಾಗ ಒಂದು ತಮಾಷೆಯ ಸಂಗತಿ ಕಂಡಿತು.

"ಕರಮಚಂದ, ವಿರಾಜಪೇಟೆಗೆ ಶೂ ಕಳ್ಳರು ಬಂದಿದ್ದಾರಂತೆ!! ಮೂರು ಮನೆಗಳಲ್ಲಿ ಶೂ ಕಳ್ಳತನವಾಗಿದೆಯಂತೆ. ತಮಾಷೆ ಏನು ಗೊತ್ತಾ? ಕಳ್ಳರು ಬರೀ ಎಡಗಾಲಿನ ಬೂಟನ್ನಷ್ಟೇ ಕದ್ದೊಯ್ದಿದ್ದಾರೆ." ಸುದ್ದಿಯನ್ನು ಓದಿ, ನಾನು ನಕ್ಕೆ.

ಆದರೆ, ಕರಮಚಂದ ಮಾತ್ರ ನಗಲಿಲ್ಲ! ಆತ ನನ್ನಿಂದ ಪತ್ರಿಕೆಯನ್ನು ತೆಗೆದುಕೊಂಡು, ಸುದ್ದಿಯನ್ನೊಮ್ಮೆ ಗಂಭೀರವಾಗಿ ಓದಿದ.

"ಬಿದ್ದಪ್ಪ, ಈ ಸುದ್ದಿಯಲ್ಲಿ ಏನೋ ಹುದುಗಿದೆ ಅಂತ ನನಗನ್ನಿಸುತ್ತೆ. ಕೇವಲ ನಕ್ಕು ಬಿಡುವಷ್ಟು ಸರಳವಲ್ಲ."

"ಯಾಕೆ ಹಾಗಂತಿ? ಇದೊಂದು ಮಾನಸಿಕ ರೋಗಿಯ ಕೃತ್ಯವಾಗಿರಬೇಕಷ್ಟೇ."

"ಮಾನಸಿಕ ರೋಗಿ ಆಗಿರಬಹುದು. ಆದರೆ, ಆ ರೋಗದ ಹಿಂದೆ ಏನೋ ಕತೆ ಇರಬಹುದಲ್ಲವೇ? ಯಾಕೆ ಆತ ಎಡಗಾಲಿನ ಬೂಟನ್ನೇ ಕದಿಯುತ್ತಾನೆ? ಅದೊಂದು ಅತ್ಯುತ್ತಮ ಅಧ್ಯಯನ ಯೋಗ್ಯ ವಸ್ತುವಾಗಿರಲೂಬಹುದು."

"ಅಂದರೆ ನೀನನ್ನುವುದೇನು?"

"ಈ ಪ್ರಕರಣವನ್ನು ತನಿಖೆ ಮಾಡೋಣ."

"ಆದರೆ, ಅದು ಹಾಸ್ಯಾಸ್ಪದವಾಗಲಿಕ್ಕಿಲ್ಲವೇ? ಹುಚ್ಚನ ಹಿಂದೆ ಬಿದ್ದ ನಾವು ಹುಚ್ಚರೆನ್ನಿಸಿಕೊಳ್ಳೋಲ್ವೇ?"

"ಇದು ಸ್ವಯಂಪ್ರೇರಿತ ತನಿಖೆ!"

ಈ ರೀತಿಯಲ್ಲಿ ವಿಚಿತ್ರ ಪ್ರಕರಣದ ತನಿಖೆಗೆ ಕರಮಚಂದ ನಾಂದಿ ಹಾಡಿದ.

ಮಧ್ಯಾಹ್ನ ನಮಗೆ ಆ ಸುದ್ದಿ ಮಾಡಿದ ವರದಿಗಾರನನ್ನು ಸಂಪರ್ಕಿಸಲು ಸಾಧ್ಯವಾಯಿತು. ಆತನ ಹೇಳಿಕೆಯಂತೆ ಒಟ್ಟು ಮೂರು ಮಂದಿ ಈ ಬೂಟು ಕಳ್ಳನಿಂದ ಸಂತ್ರಸ್ತರಾಗಿದ್ದರಂತೆ. ಒಬ್ಬಾತ ನಿಸರ್ಗ ಲೇಔಟ್ ನಿವಾಸಿ. ಇನ್ನೊಬ್ಬ ಮುತ್ತಪ್ಪ ದೇವಸ್ಥಾನದ ರಸ್ತೆಯಲ್ಲಿರುವವನು. ಮತ್ತೋರ್ವನು ಪೆವಿಲಿಯನ್ ಹತ್ತಿರದವನು. ಮೂರು ದಿನಗಳ ಅಂತರದಲ್ಲಿ ಕಳ್ಳತನ ನಡೆದಿದೆಯಂತೆ.

"ಕಳ್ಳ ಬಹುಶಃ ದಿನವೂ ಜಾಗ ಬದಲಾಯಿಸುತ್ತಾನೆ. ಒಂದೇ ಕಡೆ ಕಳ್ಳತನ ಮಾಡ್ತಿಲ್ಲ. ಯಾಕೆ?"